ಕಾರ್ಯಪಾಲಕ ಅಭಿಯಂತರರ ಕಚೇರಿ
ನಂ.2ನೇ ಕಟ್ಟಡಗಳ ವಿಭಾಗ, ಕೆ.ಆರ್.ಸರ್ಕಲ್
ಬೆಂಗಳೂರು

ದೂರವಾಣಿ 22122856, ಫ್ಯಾಕ್ಸ್ 080-22123368
e-mail eebldno2 @ gmail.com

**ಲೋಕೋಪಯೋಗಿ ಇಲಾಖೆ**

ಸಂಖ್ಯೆ:ಕಾಪಾಅ:ಕವಿ-2:ಸಇಂ-6:21-22/3358-59 ದಿನಾಂಕ: 18/1/22.

ಇವರಿಗೆ:
ಪ್ರಾಂಶುಪಾಲರು,
ಎಲಿಕ್ಸಿರ್ ಇಂಟರ್‌ನ್ಯಾಷನಲ್ ಸ್ಕೂಲ್,
ನಂ.13/3, ಖಾತೆ ನಂ.126/4,
ಸೀಗೆಹಳ್ಳಿ ಮುಖ್ಯರಸ್ತೆ, ಬಸವನಪುರ
ಬೆಂಗಳೂರು-560 049.

ಮಾನ್ಯರೆ,

| ವಿಷಯ | ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಪಡೆಯಲು ಕಟ್ಟಡ ಮೌಲ್ಯದ ಮೊತ್ತವನ್ನು ಪಾವತಿಸುವ ಬಗ್ಗೆ |
|---|---|
| ಉಲ್ಲೇಖ | 1) ಕರ್ನಾಟಕ ಸರ್ಕಾರ ಸಚಿವಾಲಯದ ಸುತ್ತೋಲೆ ತಿದ್ದುಪಡಿ ದಿನಾಂಕ 20-11-2021.<br>2) ತಮ್ಮ ಕಛೇರಿ ಪತ್ರ ದಿನಾಂಕ 22-12-2021.<br>3) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:1121:21-22:ದಿನಾಂಕ 11-01-2022.<br>4) ಈ ಕಛೇರಿ ಪತ್ರ ಸಂಖ್ಯೆ: 3316-17:21-822:ದಿನಾಂಕ 14-01-2022.<br>5) ತಮ್ಮ ಕಛೇರಿ ಪತ್ರ ಸಂಖ್ಯೆ: 18-01-2022. |

.......................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಂಶುಪಾಲರು, ಎಲಿಕ್ಸಿರ್ ಇಂಟರ್‌ನ್ಯಾಷನಲ್ ಸ್ಕೂಲ್, ನಂ.13/3, ಖಾತೆ ನಂ.126/4, ಸೀಗೆಹಳ್ಳಿ ಮುಖ್ಯರಸ್ತೆ, ಬಸವನಪುರ, ಬೆಂಗಳೂರು ರವರು ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತೀರಿ. ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರು ಸದರಿ ಕಟ್ಟಡವನ್ನು ಪರಿಶೀಲಿಸಿ ವರದಿಯನ್ನು ವಿಭಾಗ ಕಛೇರಿಗೆ ಸಲ್ಲಿಸಿರುತ್ತಾರೆ.

ಉಲ್ಲೇಖ (1) ಸರ್ಕಾರದ ಸುತ್ತೋಲೆ ತಿದ್ದುಪಡಿಯ ಅನುಸಾರ ಲೋಕೋಪಯೋಗಿ ಇಲಾಖೆ ಸಂಹಿತೆಯ ಅನ್ವಯ ಕಟ್ಟಡದ ಮೌಲ್ಯಮಾಪನವನ್ನು ಪ್ಲಿಂತ್ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ್ದು, ಉಲ್ಲೇಖ (4)ರ ಪತ್ರದಲ್ಲಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಈ ಕಛೇರಿಯಿಂದ ಪಡೆಯಲು ಕಟ್ಟಡದ ಮೌಲ್ಯದ ಶೇಕಡ 0.05 ರೂ.49,600.00 (ರೂ. ನಲವತ್ತೊಂಭತ್ತು ಸಾವಿರದ ಆರುನೂರು ರೂಪಾಯಿಗಳು ಮಾತ್ರ) ಗಳನ್ನು ಡಿ.ಡಿ. ಮುಖೇನ "ಕಾರ್ಯಪಾಲಕ ಅಭಿಯಂತರರು, ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು" ರವರ ಹೆಸರಿನಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ, ತಾವು ಉಲ್ಲೇಖ (5)ರ ಪತ್ರದಲ್ಲಿ ಶುಲ್ಕವನ್ನು ಡಿ.ಡಿ.ಸಂಖ್ಯೆ:003622 ದಿನಾಂಕ: 18-01-2022 ಆಕ್ಸಿಸ್ ಬ್ಯಾಂಕ್, ಅಯ್ಯಪ್ಪನಗರ, ಬೆಂಗಳೂರು ಶಾಖೆಯಲ್ಲಿ ಪಡೆದು ಸಲ್ಲಿಸಿರುತ್ತೀರಿ.

ಸದರಿ ಶಾಲಾ ಕಟ್ಟಡವನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ದಿನಾಂಕ **30-12-2021**ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ ರವರ ಉಪಸ್ಥಿತಿಯಲ್ಲಿ ಸ್ಥಳ ಪರಿಶೀಲಿಸಿ ಈ ಕೆಳಕಂಡಂತೆ ವಿವರಣೆಗಳನ್ನು ಉಲ್ಲೇಖ (3)ರ ಪತ್ರದಲ್ಲಿ ಸಲ್ಲಿಸಿರುತ್ತಾರೆ.

- ಪ್ರಾಂಶುಪಾಲರು, ಎಲಿಕ್ಸಿರ್ ಇಂಟರ್‌ನ್ಯಾಷನಲ್ ಸ್ಕೂಲ್, ನಂ.13/3, ಖಾತೆ ನಂ.126/4, ಸೀಗೆಹಳ್ಳಿ ಮುಖ್ಯರಸ್ತೆ, ಬಸವನಪುರ, ಬೆಂಗಳೂರು ರವರು ಕಟ್ಟಡವನ್ನು ದಿನಾಂಕ 30-12-2021 ರಂದು ಜಂಟಿ ಪರಿವೀಕ್ಷಣೆ ಕೈಗೊಳ್ಳಲಾಗಿರುತ್ತದೆ.
- ಕಟ್ಟಡವು ತಳ, ನೆಲ ಹಾಗೂ ಮೂರು ಮೇಲ್ಮಹಡಿಗಳನ್ನು ಒಳಗೊಂಡಿದ್ದು, ಸದರಿ ಕಟ್ಟಡದಲ್ಲಿ ಶಾಲಾ ಕೊಠಡಿಗಳು, ಪ್ರಾಂಶುಪಾಲರ ಕಛೇರಿ, ಸಿಬ್ಬಂದಿಗಳ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ, ಮೆಟ್ಟಿಲುಗಳನ್ನು

ಹಾಗೂ ಶೌಚಾಲಯದ ವ್ಯವಸ್ಥೆಯನ್ನು ನಿರ್ಮಿಸಲಾಗಿರುತ್ತದೆ. ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

- ಕಟ್ಟಡದ ನಕ್ಷೆ ಹಾಗೂ ವಿನ್ಯಾಸದ ನಕ್ಷೆಗಳನ್ನು ನೀಡಿದ್ದು, ಅದರಂತೆ ಕಟ್ಟಡವನ್ನು ನಿರ್ಮಿಸಲಾಗಿದೆ ಎಂದು ಶಾಲೆಯ ಸಿಬ್ಬಂದಿಯವರು ಧೃಡೀಕರಿಸಿರುತ್ತಾರೆ.
- ಕಟ್ಟಡದ ಸ್ಥಿರತೆಗಾಗಿ ಕಾಂಕ್ರೀಟ್ ಸಧೃಡತೆಯನ್ನು GEO Engineering PVT LTD, Bangalore ರವರು Rebound Hammer Test & Ultra Test Bangalore) ರವರಿಂದ ಪಡೆಯಲಾಗಿದ್ದು, ಕಟ್ಟಡವು ಸಧೃಡವಾಗಿರುವುದಾಗಿ ಸದರಿ ರವರಿಂದ ಧೃಡೀಕರಿಸಲಾಗಿರುತ್ತದೆ.
- ಶಾಲಾ ಕಟ್ಟಡದ ನಕ್ಷೆಗೆ ಸಹಾಯಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ, ಬಿಬಿಎಂಪಿ ರವರಿಂದ ಮಂಜೂರಾತಿ ಪಡೆದಿರುವ ಬಗ್ಗೆ ನಕ್ಷೆ ಲಗತ್ತಿಸಿರುತ್ತಾರೆ (LG.Ground Floor+3Upper Floors)
- ಅನೆಕ್ಸ್-1 ರಿಂದ 6 ಅನ್ನು ಲಗತ್ತಿಸಿರುತ್ತಾರೆ.
- ಸದರಿ ಕಟ್ಟಡದ ಒಟ್ಟು ಮೌಲ್ಯವನ್ನು ಲೋಕೋಪಯೋಗಿ ಇಲಾಖಾ ನಿಯಮಾವಳಿ ಪ್ರಕಾರ ತಯಾರಿಸಿ ಸಲ್ಲಿಸಲಾಗಿದೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ Aren Matrix Engineering Pvt.Limited ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ಮತ್ತು GEO Engineering PVT LTD, Bangalore ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡವು ಪರಿಶೀಲಿಸಲಾಗಿ ಕಟ್ಟಡವು "Structurally Stable" ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡು ಬಂದಿರುವುದರಿಂದ ದಿನಾಂಕ 01-01-2022 ರಂದು ಸ್ಥಳ ಪರಿವೀಕ್ಷಿಸಲಾಗಿ ಸದರಿ ಕಟ್ಟಡವು "Structurally Stable" ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು 2021-22ನೇ ಸಾಲಿಗೆ ನೀಡಲಾಗಿದೆ.

ಅಡಕಃ ಉಲ್ಲೇಖ (3)ರ ಪತ್ರದ ಪ್ರತಿ
ಮತ್ತು ನಮೂನೆಗಳು

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.